ಓ ಎಸ್ ನಂ. 244/2021

ಪಿ ಡಬ್ಲ್ಯು 1

ದಿನಾಂಕ 20-08-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 7 ನೇ ಪ್ರತಿವಾದಿ ಪರಃ ಶ್ರೀ ಎಸ್ ಸಿ ಎನ್ ವಕೀಲರಿಂದಃ

3. ನನ್ನ ತಂದೆ ಈಶ್ವರಪ್ಪ ಬದುಕಿದ್ದಾರೆ ಎಂದರೆ ಸರಿ. ಪ್ರತಿವಾದಿಗಳ ಸಂಖ್ಯೆ 1, 2, 4 ಮತ್ತು 5 ರವರು ದಿನಾಂಕ 22/04/1998 ರಂದು ಮಾಡಿಕೊಂಡ ವಿಭಾಗದಂತೆ ಅವರವರ ಹೆಸರಿಗೆ ಖಾತೆ ಬಂದಿರುವ ವಿಚಾರ ನನಗೆ ಗೊತ್ತಾ ಎಂದರೆ ಸಾಕ್ಷಿ ಅದು ಸುಳ್ಳು ಎಂದು ನುಡಿದಿರುತ್ತಾರೆ. ಮೇಲ್ಕಂಡ ವಿಭಾಗ ಪತ್ರದಂತೆ ದಾವಾ ಐಟಂ ನಂ.1 ರ ಸ್ವತ್ತು 5 ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸುಳ್ಳು. ದಾವಾ ಐಟಂ ನಂ.1 ರ ಸ್ವತ್ತನ್ನು 1 ಮತ್ತು 5 ನೇ ಪ್ರತಿವಾದಿಗಳು ಒಟ್ಟಾಗಿ ಒಂದೊಂದು ಎಕರೆಯಂತೆ 7 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ದಿನಾಂಕ 29/01/2004 ರಂದು 1, 2, 4 ವಮತ್ತು 5 ನೇ ಪ್ರತಿವಾದಿಗಳು ಸೇರಿಕೊಂಡು ದಾವಾ ಐಟಂ ನಂ.1 ರಲ್ಲಿ ಉಳಿದಿದ್ದ 1 ಎಕರೆ ಜಮೀನನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಸದರಿ ಮಾರಾಟದ ವಿಚಾರ ನನಗೆ ಗೊತ್ತಿಲ್ಲ, ನನಗೆ ಮೋಸ ಮಾಡಿ ಮಾರಾಟ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

4. ನಾನು ದಿನಾಂಕ 29/01/2004 ರ ಕ್ರಯಪತ್ರವನ್ನು ಮಾತ್ರ ಬಂಧನಕಾರಿಯಲ್ಲವೆಂದು ಆದೇಶಕ್ಕಾಗಿ ಕೋರಿಕೊಂಡಿದ್ದು ದಿನಾಂಕ 18/05/2002 ರ ಕ್ರಯಪತ್ರದ ಬಗ್ಗೆ ಯಾವುದೇ ಪರಿಹಾರ ಕೇಳಿಕೊಂಡಿಲ್ಲ ಎಂದರೆ ಸಾಕ್ಷಿ ಎಲ್ಲಾ ಕ್ರಯಪತ್ರಗಳ ಬಗ್ಗೆ ನಾನು ಪರಿಹಾರ ಕೇಳಿರುತ್ತೇನೆ ಎಂದು ನುಡಿದಿರುತ್ತಾರೆ. ದಿನಾಂಕ 18/05/2002 ರ ಕ್ರಯಪತ್ರದಲ್ಲಿ ದಾವಾ ಐಟಂ ನಂ.1 ರ ಸ್ವತ್ತಿನ 3 ಎಕರೆ ಪೈಕಿ 2 ಎಕರೆ ಮಾರಾಟ ಆಗಿರುತ್ತದೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯ ಹೆಸರಿಗೆ ಮೇಲೆ ಹೇಳಿದ ಕ್ರಯಪತ್ರಗಳಂತೆ ದಾವಾ ಐಟಂ ನಂ.1 ರ 3 ಎಕರೆ ಆಸ್ತಿಯೂ ಸಹ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಒಟ್ಟು ಕುಟುಂಬದ ಆಸ್ತಿ ಎಂದು ನುಡಿಯುತ್ತಾರೆ. ಒಟ್ಟು ಕುಟುಂಬದ ಸದಸ್ಯರ ಅವರು ಆರ್ಥಿಕ ಸಮಸ್ಯೆಗಳನ್ನು ನಿರ್ವಹಿಸಲು, ಬೇರೆ ಆಸ್ತಿಗಳನ್ನು ಅಭಿವೃದ್ಧಿ ಪಡಿಸಲು ಮತ್ತು ಕೈಗಡ ಸಾಲಗಳನ್ನು ತೀರಿಸಲು ದಾವಾ ಐಟಂ ನಂ.1 ರ ಆಸ್ತಿಯನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯ ಹಸೆರಿಗೆ ಆಗಿರುವಂತಹ ಕ್ರಯಪತ್ರಗಳನ್ನು ಪ್ರಶ್ನಿಸುವ ಅಧಿಕಾರ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ.

5. 7 ನೇ ಪ್ರತಿವಾದಿಗೆ ಬಂದಿದಂತಹ ದಾವಾ ಐಟಂ ನಂ.1 ರ ಸ್ವತ್ತು ಮತ್ತು ಅವರ ಕುಟುಂಬದ ಇತರೇ ಸ್ವತ್ತುಗಳ ಬಗ್ಗೆ 7 ನೇ

ಪ್ರತಿವಾದಿಯ ಮಗ ಯೋಗೇಶ್ ರವರು ವಿಭಾಗ ಕೋರಿ ತರೀಕೆರೆಯ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಓ ಎಸ್ ನಂ.190/2020 ರಂತೆ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ಐಟಂ ನಂ.1 ರ ಸ್ವತ್ತು ಕಡೂರು ತಾಲ್ಲೂಕಿಗೆ ಸೇರಿದೆ ಎಂದು ನುಡಿದಿರುತ್ತಾರೆ. ಸದರಿ ದಾವೆಯನ್ನು ದಿನಾಂಕ 19/10/2020 ರಂದು ನಡೆದ ಜನತಾ ನ್ಯಾಯಾಲಯದಲ್ಲಿ ರಾಜಿ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಆ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ರಾಜಿಯಂತೆ 7 ನೇ ಪ್ರತಿವಾದಿಯ ಮಕ್ಕಳಾದ ಯೋಗೇಶ್, ಪ್ರದೀಪ್ ಕುಮಾರ್ ಮತ್ತು ಅರುಣ್ ಕುಮಾರ್ ರವರಿಗೆ ಪ್ರಸ್ತುತ ದಾವೆಯ ಐಟಂ ನಂ.1 ರ ಆಸ್ತಿಯಲ್ಲಿ ತಲಾ 1 ಎಕರೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ರಾಜಿ ಡಿಕ್ರಿಯಂತೆ ಅವರವರ ಹೆಸರಿಗೆ ಖಾತೆ ಬದಲಾವಣೆ ಸಹ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಆ ವಿಚಾರಗಳು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಐಟಂ ನಂ.1 ರ ಸ್ವತ್ತಿನ ಖಾತೆ ಇಂದಿಗೂ ಸಹ ಯೋಗೇಶ್, ಪ್ರದೀಪ್ ಕುಮಾರ್ ಮತ್ತು ಅರುಣ್ ಕುಮಾರ್ ರವರ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲದಂತೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಮೇಲ್ಕಂಡ ವಿಚಾರವನ್ನು 7 ನೇ ಪ್ರತಿವಾದಿ 2022 ರಲ್ಲಿ ಸಲ್ಲಿಸಿದಂತಹ ತನ್ನ ಪ್ರತಿವಾದ ಪತ್ರದಲ್ಲಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಆ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಮೇಲ್ಕಂಡ ಯೋಗೇಶ್, ಪ್ರದೀಪ್ ಕುಮಾರ್ ಮತ್ತು ಅರುಣ್ ಕುಮಾರ್ ರವರನ್ನು ಪ್ರಸ್ತುತ ದಾವೆಯಲ್ಲಿ

ನಾನು ಅವಶ್ಯಕ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿ ನಮ್ಮ ಕುಟುಂಬದವರನ್ನು ನಾನು ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದು ನುಡಿದಿರುತ್ತಾರೆ. ತರೀಕೆರೆ ನ್ಯಾಯಾಲಯದ ಓ ಎಸ್ ನಂ. 190/2020 ರ ರಾಜಿ ಡಿಕ್ರಿಯನ್ನು ಪ್ರಸ್ತುತ ದಾವೆಯಲ್ಲಿ ನಾನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ.

6. ನನ್ನ ವಿವಾಹವಾದ ನಂತರದಲ್ಲಿ ನನ್ನ ತಂದೆಯ ಬಳಿ ಒಟ್ಟು ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಡಬೇಕೆಂದು ನಾನು ಎಂದಿಗೂ ಸಹ ಕೇಳಿಕೊಂಡಿರುವುದಿಲ್ಲ. ಇಂದಿಗೂ ಸಹ ನಾನು ನನ್ನ ತಂದೆ ಮತ್ತು ಸಹೋದರರ ಜತೆ ಚೆನ್ನಾಗಿಲ್ಲ ಎಂದರೆ ಸರಿ. ಅವರ ಮೇಲೆ ಇರುವಂತಹ ಸಿಟ್ಟಿನ ಪ್ರತೀಕಾರವಾಗಿ ನಾನು ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1, 2, 4 ಮತ್ತು 5 ನೇ ಪ್ರತಿವಾದಿಗಳು ಒಟ್ಟು ಕುಟುಂಬದ ಅವಶ್ಯಕತೆಗಾಗಿ ದಾವಾ ಐಟಂ ನಂ.1 ರ ಸ್ವತ್ತನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿರುವುದರಿಂದ ಆ ಆಸ್ತಿಯಲ್ಲಿ ನನಗೆ ಯಾವುದೇ ಹಿಸ್ಸೆ ಮತ್ತು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಇಂದಿಗೂ ಸಹ ದಾವಾ ಐಟಂ ನಂ.1 ರ ಸ್ವತ್ತಿಗೆ 7 ನೇ ಪ್ರತಿವಾದಿಯ ಕುಟುಂಬದ ಸದಸ್ಯರೇ ಮಾಲೀಕರು ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರದನ್ಯಾದಂ., ಕಡೂರು.